ವಕ್ಫ್‌ಗೆ ಸಂಬಂಧಿಸಿದ ಆಸ್ತಿಯಲ್ಲಿ ರಸ್ತೆ ನಿರ್ಮಾಣ.

938(1069) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ನಗರದಲ್ಲಿರುವ ವಕ್ಫ್‌ಗೆ ಸಂಬಂಧಿಸಿದ ಆಸ್ತಿಯನ್ನು ಕೆಲವರು ಅತಿಕ್ರಮಿಸಿ ಆ ಸ್ಥಳದಲ್ಲಿ ರಸ್ತೆ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅತಿಕ್ರಮಿಸಿರುವವರ ವಿರುದ್ಧ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು ;

ಆ) ವಕ್ಫ್ ಸೇರಿದ ಬಿಸ್ಮಿಲ್ಲಾ ಕಾವಲಿ ಮಕಾನಿನಲ್ಲಿ ವಾಸಿಸುತ್ತಿರುವ ಬಡ ಮುಸ್ಲಿಂ ಜನತೆಗೆ ಪಟ್ಟಾ ವಿತರಣೆ ಮಾಡಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

ಅ) ಹೌದು.

ಕರ್ನಾಟಕ ವಕ್ಫ್ ಮಂಡಳಿಯ ಗಮನಕ್ಕೆ ತಾರದೇ ಅನುಮೋದನೆ ಇಲ್ಲದೆ, ಮಸೀದಿ-ಇ-ಅಜಂ, ವಿರಾಜಪೇಟೆ, ಇದರ ಕಾರ್ಯಕಾರಿ ಸಮಿತಿಯವರು ವಿರಾಜಪೇಟೆಯ ಸರ್ವೆ ನಂ. 731 ರಲ್ಲಿ 260x12 ಅಡಿ ಅಳತೆಯ ಜಾಗವನ್ನು ರಸ್ತೆಯನ್ನು ನಿರ್ಮಾಣ ಮಾಡುವ ಸಲುವಾಗಿ ನೀಡಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಕಾರ್ಯಕಾರಿ ಸಮಿತಿ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬಿಸ್ಮಿಲ್ಲಾ ಖಾ ವಾಲಿ ಮಕಾನ್ ಖಬರ್‌ಸ್ತಾನ್, ಇದು ವಿರಾಜಪೇಟೆಯಲ್ಲಿರುತ್ತದೆ. ಮಂಡಳಿಯ ಅನುಮೋದನೆ ಇಲ್ಲದೇ ಸ್ಥಳೀಯ ಮುಸ್ಲೀಮರು ಸುಮಾರು ಅರ್ಧದಷ್ಟು ಜಾಗವನ್ನು ಅತಿಕ್ರಮಿಸಿಕೊಂಡು, ಜಾಗದಲ್ಲಿ ಮನೆಗಳನ್ನು ಕಟ್ಟಿರುತ್ತಾರೆ. ಈ ಅತಿಕ್ರಮವಾಗಿ ಅಕ್ರಮಿಸಿರುವ ಜಾಗವನ್ನು ಸಕ್ರಮಗೊಳಿಸುವ ಬಗ್ಗೆ ವಿಷಯವು ಮಂಡಳಿಯ ಪರಿಶೀಲನೆಯಲ್ಲಿದೆ.

ವಕ್ಫ್ ಮಂಡಳಿಯು ಹಕ್ಕು ಪತ್ರ ನೀಡದಿರುವುದು.

939(1170) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ನಗರದಲ್ಲಿರುವ ಬಿಸ್ಮಿಲ್ಲಾಖಾವುಲಿ ಮಖಾನ್‌ನಲ್ಲಿ ಅಲ್ಪ ಸಂಖ್ಯಾತರ ಕುಟುಂಬಗಳು ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದು ಅವರಿಗೆ ವಕ್ಫ್ ಮಂಡಳಿಯವರು ಹಕ್ಕು ಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;